೧	೨	೩	೪	೫
೧೯.	ಕಾರವಾರ	೧. ಅಂಕೋಲಾ	೧೬	
		೨. ಹೊನ್ನಾವರ	೪	
		೩. ಕುಮಟಾ	೧೧೪	
			೧೩೪	
೨೦.	ತುಮಕೂರು	೧. ಚಿಕ್ಕನಾಯ್ಕನಹಳ್ಳಿ	೭೧೭	
		೨. ಗುಬ್ಬಿ	೧೧೯೭	
		೩. ಕೊರಟಗೆರೆ	೧೧೬	
		೪. ಕುಣಿಗಲ್	೯೪	
		೫. ಮಧುಗಿರಿ	೨೪೨	
		೬. ಪಾವಗಡ	೧೭೨೩	
		೭. ಸಿರಾ	೧೧೯೦	
		೮. ತಿಪಟೂರು	೧೫೧೨	
		೯. ತುಮಕೂರು	೭೬	
		೧೦. ತುರುವೆಕೆರೆ	೩೭೨	
			೭೨೯೯	

ರಾಜ್ಯದ ಒಟ್ಟು ಕೈಮಗ್ಗಗಳು : ೮೧,೨೫೨.

ಕೈಮಗ್ಗ ನೇಕಾರರ ಮುಷ್ಕರದ ಸ್ಥಿತಿ

೩೫೯ (೬೫೯) ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಇತ್ತೀಚೆಗೆ ಬಿಜಾಪುರ ಜಿಲ್ಲೆಯಾದಂಥ ರಾಜ್ಯ ಕೈಮಗ್ಗ, ನಿಗಮದ ಅಡಿಯಲ್ಲಿ ಬರುವ ನೇಕಾರರು ಉಪವಾಸ ಸತ್ಯಾಗ್ರಹ ಇತ್ಯಾದಿಯಾಗಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಮುಷ್ಕರ ನಿರತ ಕೈಮಗ್ಗ ನೇಕಾರರ ಬೇಡಿಕೆಗಳ ವಿವರ ನೀಡುವುದು ?

ಇ) ನೇಯ್ಗೆ ಮಜೂರಿಯನ್ನು ಹೆಚ್ಚಳ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ನೇಕಾರರ ಬೇಡಿಕೆಗಳು ಈ ಕೆಳಗಿನಂತಿರುತ್ತವೆ:

೧ ರಾಜ್ಯ ಸರ್ಕಾರದವರು ಕೆ.ಹೆಚ್.ಡಿ.ಸಿ.ಗೆ ಕೊಡಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು.

೨ ಪ್ರತಿಯೊಬ್ಬ ನೇಕಾರನಿಗೆ ನೂಲಿನ ಚೀಟಿಯಾದ ದಿವಸ ನೂಲು ಮತ್ತು ಭೀಮ್ಸ್ ಸಿಗಬೇಕು. ೨೪ ಗಂಟೆಯೊಳಗೆ ಸಿಗದೆ ಇದ್ದರೆ ಒಂದು ದಿವಸಕ್ಕೆ ರೂ. ೨೫ ಪಗಾರ ಕೊಡಬೇಕು.

೩ ಪಕ್ಕಾ ನೂಲನ್ನು ಮುಟ್ಟಿಸಲು ಹೋದಾಗ ಒಂದು ಗಂಟೆಯೊಳಗೆ ಮಜೂರಿ ಸಿಗಬೇಕು ಒಮ್ಮಿಂದ ಒಮ್ಮೆಲೆ ಆಫೀಸಿನ ಪಕ್ಕಾ ಮಾಲು ತೆಗೆದುಕೊಳ್ಳುವ ವಿಭಾಗವನ್ನು ಬಂದ್ ಮಾಡಬಾರದು.

೪ ಈಗ ಸದ್ಯಕ್ಕೆ ಪೇಟೆಯಲ್ಲಿ ಜೀವನಾವಶ್ಯಕ ವಸ್ತುಗಳ ಧಾರಣೆ ವಿಪರೀತ ಏರಿದ್ದರಿಂದ ಕೈಮಗ್ಗ ನೇಕಾರರಿಗೆ ಸಿಗುವ ಮಜೂರಿಯಲ್ಲಿ ಹೊಟ್ಟೆ ತುಂಬಿಸಿಕೊಳ್ಳುವುದು ಅಸಾಧ್ಯವಾಗಿದೆ ಕಾರಣ ಅವರಿಗೆ ಶೇಕಡ ೩೦ರಂತೆ ಹೆಚ್ಚಿಗೆ ಮಜೂರಿ ಸಿಗಬೇಕು. ಈ ನಿರ್ಣಯ ತೆಗೆದುಕೊಳ್ಳುವಾಗ ನೇಕಾರ ಪ್ರತಿನಿಧಿಗಳನ್ನು ಚರ್ಚೆಗೆ ಆಮಂತ್ರಿಸಿ ನಿರ್ಣಯ ತೆಗೆದುಕೊಳ್ಳಬೇಕು.

೫ ನೇಕಾರರಿಗೆ ಕೊಡುವ ಉತ್ಪಾದನಾ ಉಪಕರಣಗಳಾದ ಮಗ್ಗ ತಟ್ಟು ಲಾಳಿ ಮಗ್ಗೆರೆ ಸಾಮಾನುಗಳಿಗೆ ಮೊದಲಿನಂತೆ ೭೫ ರಂತೆ ಸಬ್ಸಿಡಿ ದರದಲ್ಲಿ ಕೊಡಬೇಕು.

೬ ಕಚ್ಚಾ ಮಾಲು ತೀರ ಕೀಳುದರ್ಜೆಯದು ಇರುತ್ತದೆ. ಕೌಂಟು ಸಹ ಸರಿಯಾಗಿ ಇರುವುದಿಲ್ಲ ಮೆರಘು ಕಡಿಮೆ ಇರುತ್ತದೆ. ಇದರಿಂದ ತಯಾರಾದ ಮಾಲು ಉತ್ತಮ ಆಗುವುದಿಲ್ಲ. ಇದರಿಂದ ನೇಕಾರರ ಮತ್ತು ನೌಕರರ ನಡುವೆ ತಕರಾರು ಆಗುತ್ತದೆ. ಇದರಿಂದ ನೇಕಾರರಿಗೆ ತೊಂದರೆಯಾಗುತ್ತದೆ.

೭ ಡಚ್‌ಕಾಲನಿಯಲ್ಲಿರುವ ನೇಕಾರರಿಗೆ ಕುಡಿಯುವ ನೀರಿನ ವ್ಯವಸ್ಥೆ ಸರಿ ಇಡಬೇಕು,

೮ ಹೊಸ ಪಾಸ್ ಬುಕ್‌ಗಳನ್ನು ಕೂಡಲೇ ಮಂಜೂರು ಮಾಡಬೇಕು.

೯ ಈಗಿರುವ ತರಬೇತಿ ಕೇಂದ್ರದಲ್ಲಿ ಉಚ್ಚಮಟ್ಟದ ತರಬೇತಿ ಕೊಡಲು ಯೋಗ್ಯರಾದಂಥವರನ್ನು ನೇಮಿಸಬೇಕು.

೧೦ ತರಬೇತಿ ಪಡೆದವರಿಗೆ ಸ್ವಂತ ಉದ್ಯೋಗ ಮಾಡಲು ಅವರವರ ತರಬೇತಿ ಪ್ರಕಾರ ಮಗ್ಗ ಹಾಗೂ ಇತ್ಯಾದಿ ಸವಲತ್ತು ದೊರಕಬೇಕು.

೧೧ ಕೈಹೆಚ್.ಡಿ.ಸಿ.ಯ ನಿರ್ದೇಶಕ ಸಮಿತಿಯಲ್ಲಿ ಕನಿಷ್ಟ ಇಬ್ಬರು ಸಂಘದ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು.

೧೨ ನಿವೇಶನ ರಹಿತ ನೇಕಾರರಿಗೆ ಕೂಡಲೇ ನಿವೇಶನಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು.

೧೩ ಬಹಳ ವರ್ಷಗಳಿಂದ ವಸತಿ ಮಾಡಿ ನಿವೇಶನ ಕಟ್ಟಿಕೊಂಡು ಫಾರೆಸ್ಟ್ ಏರಿಯಾದಲ್ಲಿ ಇರುತ್ತಿರುವ ನೇಕಾರರ ಹೆಸರಿಗೆ ನೇಕಾರಿಕೆಗೆ ಅನುಕೂಲ ಆಗುವಂತೆ ಕನಿಷ್ಟ ೪೦X೬೦ ಜಾಗಯನ್ನು ಅವರವರ ಹೆಸರಿಗೆ ಮೂಲಕೀ ಹಕ್ಕು ಕೊಡಬೇಕು.

೧೪ ನೇಕಾರ ಮಕ್ಕಳಿಗೆ ಶಿಕ್ಷಣ, ಔಷಧ, ಹಾಗೂ ಇತ್ಯಾದಿ ಸವಲತ್ತು ಸಿಗಬೇಕು.

೧೫ ಕಲಿತ ನೇಕಾರ ಮಕ್ಕಳಿಗೆ ಕೆ.ಹೆಚ್.ಡಿ.ಸಿ.ಯಲ್ಲಿ ಕೆಲಸಕ್ಕೆ ಆಧ್ಯತೆ ಕೊಡಬೇಕು.

ಇ) ೧-೪-೮೯ ರಿಂದ ನೇಯ್ಗೆ ಮಜೂರಿಯನ್ನು ಹೆಚ್ಚಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆ.

ಕಪ್ಪು, ಬೂದು ಮತ್ತು ಬಿಳಿ ಎಂದು ತಾಲ್ಲೂಕುಗಳ ವರ್ಗೀಕರಣ

೩೪೦ (೬೩೦) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ಬಳಕೆಯಲ್ಲಿ ಕೆಲವು ತಾಲ್ಲೂಕುಗಳನ್ನು ಕಪ್ಪು, ಬೂದು ಮತ್ತು ಬಿಳಿ ಎಂದು ವರ್ಗೀಕರಿಸಿರುವುದು ನಿಜವೇ ? (ಹಾಗಿದ್ದಲ್ಲಿ ಆ ತಾಲ್ಲೂಕುಗಳ ಪಟ್ಟಿಯನ್ನು ಕೊಡಿ.)